ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಆಯಿತು.

ಅಧ್ಯಕ್ಷರು: ಮಾನ್ಯ ಯು.ಟಿ.ಖಾದರ್ ಇಲ್ಲ. ಅವರ ಪ್ರಶ್ನೆಯನ್ನು ಗೋಪಾಲ ಭಂಡಾರಿಯವರು ನೀವು ಕೇಳುತ್ತೀರಾ? ಕೇಳಿ.

ಮಂಗಳೂರು ಕ್ಷೇತ್ರವ್ಯಾಪ್ತಿಯಲ್ಲಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮತ್ತು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ.

11 (30) ಶ್ರೀ ಖಾದರ್. ಯು.ಟಿ (ಮಂಗಳೂರು)

ಶ್ರೀ ಬಿ.ಶ್ರೀ ರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಘಟಕ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಎಷ್ಟು (ವಿವರಗಳನ್ನು ನೀಡುವುದು);

ರಾಜ್ಯದಲ್ಲಿನ ಎಲ್ಲಾ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಪ್ರಾಥಮಿಕ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

1. ಉಳ್ಳಾಲ
2. ಬೋಳಿಯಾರ್
3. ಅಂಬ್ಲಮೊಗರು
4. ನಾಟೆಕಲ್
5. ಕೋಟೆಕಾರ್

ಆ) ಈ ಪ್ರಾಥಮಿಕ ಆರೋಗ್ಯ ಘಟಕ / ಕೇಂದ್ರಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿಯ ಕೊರತೆಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಮಂಗಳೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 6 ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿದ್ದು, ಎಲ್ಲ ಹುದ್ದೆಗಳು ಭರ್ತಿಯಾಗಿವೆ.

ವಿವಿಧ ವೃಂದದ ಒಟ್ಟು 26 ಅರೆವೈದ್ಯಕೀಯ ಸಿಬ್ಬಂದಿಯ ಹುದ್ದೆಗಳ ಕೊರತೆ ಇರುತ್ತದೆ.

ಇ) ಹಾಗಿದ್ದಲ್ಲಿ, ಈ ಸಿಬ್ಬಂದಿಗಳನ್ನು ನೇಮಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 5021 ಅರೆವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರನೇಮಕಾತಿ ಮುಖಾಂತರ ಭರ್ತಿಮಾಡಲು, ನೇಮಕಾತಿ ನಿಯಮಗಳ ಕರಡು ಅಧಿಸೂಚನೆಯನ್ನು ಆಕ್ಷೇಪಣೆ/ಸಲಹೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ದಿನಾಂಕ:7-2-2009 ರಂದು ಹೊರಡಿಸಲಾಗಿದೆ. ಸದರಿ ನಿಯಮಗಳು ಅಂತಿಮಗೊಂಡ ನಂತರ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳುತ್ತದೆ. ಅಭ್ಯರ್ಥಿಗಳು ಲಭ್ಯವಾದ ನಂತರ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ಶ್ರೀ ಗೋಪಾಲ ಭಂಡಾರಿ (ಶ್ರೀ ಯು.ಟಿ.ಖಾದರ್ ಪರವಾಗಿ): ಮಾನ್ಯ ಅಧ್ಯಕ್ಷರೆ, ಇಲ್ಲಿರುವ ಪ್ರಶ್ನೆ ಇಷ್ಟೆ. ಮಂಗಳೂರು ವಿಧಾನಸಭೆ ಕ್ಷೇತ್ರದಲ್ಲಿ ಆರೋಗ್ಯ ಅಧಿಕಾರಿಗಳ ಮತ್ತು ವೈದ್ಯರ ಹುದ್ದೆ ಎಷ್ಟು ಭರ್ತಿಯಾಗಿದೆ ಎನ್ನತಕ್ಕಂಥ ಪ್ರಶ್ನೆ. ವೈದ್ಯರ 6 ಹುದ್ದೆಗೆ 6 ಹುದ್ದೆಗಳು ಭರ್ತಿಯಾಗಿವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಆರೋಗ್ಯ ಇಲಾಖೆಯಲ್ಲಿ ಅರೆವೈದ್ಯಕೀಯ ಹುದ್ದೆಗಳನ್ನು ಹೆಚ್ಚು-ಕಡಿಮೆ 5021ರಷ್ಟು ಹುದ್ದೆಗಳು ತೆರವಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅದರಲ್ಲಿಯೂ ಕೂಡ ವಿಶೇಷವಾಗಿ ನಮ್ಮ ಕರಾವಳಿ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ತಾವೆಲ್ಲಾ ನೋಡಿದ್ದೀರಿ ಚಿಕುನ್ ಗುನ್ಯಾ ಬಹಳ ದೊಡ್ಡ ಪ್ರಮಾಣದಲ್ಲಿ ಬಂದಿದ್ದು ಜನರಲ್ಲಿ ಒಂದು ಭಯದ ವಾತಾವರಣವನ್ನು ಸೃಷ್ಟಿ ಮಾಡಿತ್ತು. ಕೆಲವು ವರ್ಷಗಳ ಹಿಂದೆ ಮಲೇರಿಯಾ ರೋಗ ಸಂಪೂರ್ಣ ನಿರ್ಮೂಲನೆಯಾಗಿದೆ ಎಂದರೂ ಕೂಡ ನಮ್ಮ ಜಿಲ್ಲೆಯಲ್ಲಿ ಇದೆ. ಅರೆವೈದ್ಯಕೀಯ ಸಿಬ್ಬಂದಿಯವರ ಅವಶ್ಯಕತೆ ಬಹಳ ಇದೆ. ಇಲ್ಲಿ ಆರೋಗ್ಯದ ಬಗ್ಗೆ ವೈದ್ಯರು ಚಿಕಿತ್ಸೆಯನ್ನು ಕೊಟ್ಟರೂ ಸಹ ಖಾಯಿಲೆ ಬಾರದೆ ಇರತಕ್ಕಂಥ ವಾತಾವರಣವನ್ನು ನಿರ್ಮಾಣ ಮಾಡಲಿಕ್ಕೆ ಆ ರೋಗವನ್ನು ನಿಯಂತ್ರಣ ಮಾಡಲಿಕ್ಕೆ ಇವರ ಜವಾಬ್ದಾರಿ ಬಹಳ ಇದೆ. ಆದರೆ ಉತ್ತರದಲ್ಲಿ ನೇರ ನೇಮಕಾತಿ ಬಗ್ಗೆ ಒಂದು ಕರಡು ನಿಯಮವನ್ನು ಮಾಡಿದ್ದೇವೆ. ಅದಕ್ಕೆ ನಾವು ಆಕ್ಷೇಪಣೆಗಳನ್ನು ಕೇಳಿದ್ದೇವೆ. ಅದೆಲ್ಲಾ ಆದ ನಂತರ ನಾವು ಭರ್ತಿ ಮಾಡುತ್ತೇವೆಂದು ಹೇಳಿದ್ದಾರೆ. ಅಂದರೆ ಇದಕ್ಕೆ ಎಷ್ಟು ಸಮಯ ಆಗುತ್ತದೆ. ಸದ್ಯಕ್ಕೆ ಆಗುವಂಥ ಪರಿಸ್ಥಿತಿ ಕಾಣುತ್ತಿಲ್ಲ. ಆದುದರಿಂದ ಎಷ್ಟು ಸಮಯದಲ್ಲಿ ಭರ್ತಿ ಮಾಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟರೆ ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಆರೋಗ್ಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಆರು ವೈದ್ಯಾಧಿಕಾರಿಗಳ ಹುದ್ದೆಗಳನ್ನು ನಾವು ತುಂಬಿದ್ದೇವೆ. ಆದರೆ ಇನ್ನು 26 ಅರೆವೈದ್ಯಕೀಯ ಹುದ್ದೆಗಳು ಅಲ್ಲಿ ಖಾಲಿ ಇವೆ, ಅದನ್ನು ತುಂಬುವ ಪ್ರಕ್ರಿಯೆಯನ್ನು ಈಗಾಗಲೇ ನಾವು ಪ್ರಾರಂಭಿಸಿದ್ದೇವೆ. 22ನೇ ತಾರೀಖು objection call for ಮಾಡಿದ್ದೇವೆ. ಅದು ಮುಕ್ತಾಯವಾಗುತ್ತದೆ. 23ನೇ ತಾರೀಖಿನಿಂದ 5,021 ಹುದ್ದೆಗಳಿಗೆ ಅರ್ಜಿಗಳನ್ನು ನಾವು ಆಹ್ವಾನ ಮಾಡುತ್ತೇವೆ. ನಂತರ ಮೂರು ತಿಂಗಳಲ್ಲಿ ಅವರ ನೇಮಕಾತಿ ಪ್ರಕ್ರಿಯೆಯನ್ನು ಮುಗಿಸಬೇಕೆಂದು ನಾವು ಕಾರ್ಯಯೋಜನೆಯನ್ನು ಹಾಕಿಕೊಂಡಿರುತ್ತೇವೆ. ಮಂಗಳೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಖಾಲಿಯಾಗುವ ಆ 26 ಹುದ್ದೆಗಳನ್ನು ಆ ಸಂದರ್ಭದಲ್ಲಿ ತುಂಬುವುದಕ್ಕೆ ಸಹಾ ನಾವು ಕ್ರಮವನ್ನು ಕೈಗೊಳ್ಳುತ್ತೇವೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಕೆ.ಎಸ್.ಈಶ್ವರಪ್ಪ (ಮಾನ್ಯ ಇಂಧನ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 19.2.2009ರ ಒಂದನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 25 ಪ್ರಶ್ನೆಗಳ ಪೈಕಿ 21 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು.

3. <u>ಸಭೆಯ ಮುಂದಿಡಲಾದ ಕಾಗದ ಪತ್ರಗಳು</u>

ಅಧ್ಯಕ್ಷರು: ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಅ) ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಗಳು)ಅವರು:–

ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಧನವಿನಿಯೋಗ ಹಾಗೂ ಹಣಕಾಸು ಲೆಕ್ಕಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಆ) ಶ್ರೀ ಬಿ.ಎಸ್.ಯಡಿಯುರಪ್ಪ (ಮುಖ್ಯಮಂತ್ರಿಗಳು)ಅವರು:–

ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151 (2)ನೇ ಅನುಚ್ಛೇದದ ಮೇರೆಗೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಲೆಕ್ಕ ಪರಿಶೋಧನಾ (ರಾಜಸ್ವ ಸ್ವೀಕೃತಿ) ವರದಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು: ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಈಗ ಸದನವನ್ನು ಸಂಜೆ 4.00 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.